# ಕಲ್ಕಿ ಟಿವಿ ಚಾನೆಲ್ ಆರಂಭ

**ಬೆಂಗಳೂರು:** ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವಿಸಸ್ ಪ್ರೈ. ಲಿ. ಸಂಸ್ಥೆಯು 'ಕಲ್ಕಿ ಕನ್ನಡ' ಟಿವಿ ಚಾನೆಲ್ ಆರಂಭಿಸಿದೆ. ಬದಲಾಗುತ್ತಿರುವ ಜನರ ಅಭಿರುಚಿ, ಕಲೆ, ಸಂಸ್ಕೃತಿ ಮತ್ತು ಕನ್ನಡಿಗರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ಈ ಚಾನೆಲ್ ಆರಂಭಿಸಲಾಗಿದೆ ಎಂದು ಸಂಸ್ಥೆ ಹೇಳಿದೆ. ಮೊದಲ ಬಾರಿ ಎಚ್‌ಡಿ ತಂತ್ರಜ್ಞಾನವನ್ನು ಕನ್ನಡ ಟಿವಿ ಚಾನೆಲ್‌ಗಳಲ್ಲಿ ತರಲಾಗುತ್ತಿದೆ. ಕುಟುಂಬ ಸಮೇತ ನೋಡುವ ಸದಭಿರುಚಿಯ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ ಎನ್ನುತ್ತಾರೆ ಸಂಸ್ಥೆಯ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಪಿ ಕೈಲಾಸಂ. ಮಾಳವಿಕಾ ಅವಿನಾಶ್ ಅವರು ಕಾರ್ಯಕ್ರಮ ವಿಭಾಗದ ಮುಖ್ಯಸ್ಥರಾಗಿದ್ದಾರೆ.